**All India Radio: Bangalore**
**National Bulletin In Kannada**
**24.05.2026  1.10 p.m.**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**24.05.2026  1.10 p.m.**
**<><><><>**

ಮುಖ್ಯಾಂಶಗಳು

1. ಭಾರತ-ಅಮೆರಿಕ ವಿಶಾಲವಾದ ಸಹಕಾರದೊಂದಿಗೆ ಸಮಗ್ರ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆ ಹೊಂದಿವೆ - ಕೇಂದ್ರ ಸಚಿವ ಡಾ.ಎಸ್.ಜೈಶಂಕರ್
2. ಎಬೋಲಾ ವೈರಸ್ ತುರ್ತು ಪರಿಸ್ಥಿತಿ; ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ, ಉಗಾಂಡಾ, ದಕ್ಷಿಣ ಸುಡಾನ್‌ಗೆ ಅನಿವಾರ್ಯವಲ್ಲದ ಪ್ರಯಾಣ ತಪ್ಪಿಸಲು ಕೇಂದ್ರ ಸರ್ಕಾರ ಭಾರತೀಯ ನಾಗರಿಕರಿಗೆ ಸೂಚನೆ
3. ಮಿಜೋರಾಂನಲ್ಲಿ ನಾಳೆ ಈಶಾನ್ಯ ಪ್ರದೇಶದ ಪ್ರಾದೇಶಿಕ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಲಿರುವ ಸಚಿವ ರಾಜೀವ್ ರಂಜನ್ ಸಿಂಗ್
4. ಐಪಿಎಲ್ ಟಿ-೨೦ ಕ್ರಿಕೆಟ್; ಇಂದು ಮುಂಬೈ ಇಂಡಿಯನ್ಸ್ - ರಾಜಸ್ತಾನ್ ರಾಯಲ್ಸ್ ಹಾಗೂ ಕೊಲ್ಕತ್ತಾ ನೈಟ್ ರೈಡರ್ಸ್ - ಡೆಲ್ಲಿ ಕ್ಯಾಪಿಟಲ್ಸ್ ಮುಖಾಮುಖಿ

<><><><>

ಭಾರತ-ಅಮೆರಿಕ ನಡುವೆ ಆಳವಾದ ಮತ್ತು ವಿಶಾಲವಾದ ಸಹಕಾರದೊಂದಿಗೆ ಸಮಗ್ರ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆ ಇದೆ ಎಂದು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಹೇಳಿದ್ದಾರೆ. ನವದೆಹಲಿಯಲ್ಲಿಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರೊಂದಿಗಿನ ಸಭೆಯಲ್ಲಿ ವಿದೇಶಾಂಗ ಸಚಿವರು, ತಮ್ಮ ಆರಂಭಿಕ ಭಾಷಣದಲ್ಲಿ ಹೀಗೆ ಹೇಳಿದ್ದಾರೆ. ಉಭಯ ರಾಷ್ಟ್ರಗಳ ಸಂಬಂಧಗಳು ಪ್ರಪಂಚದ ಇತರ ದೇಶಗಳ ಮೇಲೆ ಪರಿಣಾಮ ಬೀರುತ್ತವೆ. ಭಾರತ ಮತ್ತು ಅಮೆರಿಕ ಪ್ರಪಂಚದ ಹಲವು ಭಾಗಗಳ ಅನೇಕ ವಿಷಯಗಳಲ್ಲಿ ಒಮ್ಮುಖ ಆಸಕ್ತಿಯನ್ನು ಹೊಂದಿವೆ ಎಂದು ತಿಳಿಸಿದ್ದಾರೆ. ಸಂಕೀರ್ಣ ಸಮಯದ ನಡುವೆ ಮಾತುಕತೆಗಾಗಿ ಎದುರು ನೋಡುತ್ತಿರುವುದಾಗಿ ತಿಳಿಸಿದ ಸಚಿವ ಡಾ.ಎಸ್.ಜೈಶಂಕರ್, ಮುಕ್ತ ಮತ್ತು ಫಲಪ್ರದ ಚರ್ಚೆ ನಡೆಸುವ ವಿಶ್ವಾಸವನ್ನೂ ವ್ಯಕ್ತಪಡಿಸಿದ್ದಾರೆ. ಈ ತಿಂಗಳ ೨೬ ರಂದು

ನಡೆಯಲಿರುವ ಕ್ವಾಡ್ ವಿದೇಶಾಂಗ ಮಂತ್ರಿಗಳ ಸಭೆಯಲ್ಲಿ ಭಾಗವಹಿಸಲು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ನಾಲ್ಕು ದಿನಗಳ ಭೇಟಿಗಾಗಿ ನಿನ್ನೆ ಭಾರತಕ್ಕೆ ಆಗಮಿಸಿದ್ದಾರೆ. ಕ್ವಾಡ್ ವಿದೇಶಾಂಗ ಮಂತ್ರಿಗಳ ಸಭೆಯಲ್ಲಿ ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್, ಆಸ್ಟ್ರೇಲಿಯಾದ ವಿದೇಶಾಂಗ ಸಚಿವ ಪೆನ್ನಿ ವಾಂಗ್, ಜಪಾನ್‌ನ ವಿದೇಶಾಂಗ ಸಚಿವ ತೋಶಿಮಿಟ್ಸು ಮೊಟೆಗಿ ಮತ್ತು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಭಾಗವಹಿಸಲಿದ್ದಾರೆ. ಆದ್ಯತೆಯ ಕ್ಷೇತ್ರಗಳಲ್ಲಿ ಕ್ವಾಡ್ ಸಹಕಾರವನ್ನು ಮುಂದುವರಿಸುವ ಕುರಿತು ನಾಯಕರು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುವ ನಿರೀಕ್ಷೆಯಿದೆ. ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ನಡೆಯುತ್ತಿರುವ ಉಪಕ್ರಮಗಳು ಮತ್ತು ಪರಸ್ಪರ ಕಾಳಜಿಯ ಇತರ ವಿಷಯಗಳ ಪ್ರಗತಿಯನ್ನು ಪರಿಶೀಲಿಸುವ ನಿರೀಕ್ಷೆಯಿದೆ.

<><><><>

ಎಬೋಲಾ ಏಕಾಏಕಿ ಹರಡುತ್ತಿರುವ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಮುಂದಿನ ಸೂಚನೆ ಬರುವವರೆಗೆ ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ, ಉಗಾಂಡಾ ಮತ್ತು ದಕ್ಷಿಣ ಸುಡಾನ್‌ಗೆ ಅನಿವಾರ್ಯವಲ್ಲದ ಪ್ರಯಾಣವನ್ನು ತಪ್ಪಿಸಲು ಕೇಂದ್ರ ಸರ್ಕಾರ ಎಲ್ಲಾ ಭಾರತೀಯ ನಾಗರಿಕರಿಗೆ ಸೂಚಿಸಿದೆ. ಪ್ರಸ್ತುತ ಈ ದೇಶಗಳಲ್ಲಿ ವಾಸಿಸುತ್ತಿರುವ ಅಥವಾ ಪ್ರಯಾಣಿಸುತ್ತಿರುವ ಭಾರತೀಯ ನಾಗರಿಕರು ಸ್ಥಳೀಯ ಅಧಿಕಾರಿಗಳು ನೀಡಿದ ಸಾರ್ವಜನಿಕ ಆರೋಗ್ಯ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಮತ್ತು ಹೆಚ್ಚಿನ ಮುನ್ನೆಚ್ಚರಿಕೆಗಳನ್ನು ಕಾಯ್ದುಕೊಳ್ಳಬೇಕು ಹಾಗೂ ಭಾರತದಲ್ಲಿ ಯಾವುದೇ ಎಬೋಲಾ ವೈರಸ್ ಪತ್ತೆಯಾದ ಪ್ರಕರಣ ವರದಿಯಾಗಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ತಿಳಿಸಿದೆ. ಈ ಹಿಂದೆ, ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ-ಡಿಆರ್‌ಸಿ ಮತ್ತು ಉಗಾಂಡಾದಲ್ಲಿ ಎಬೋಲಾ ಕಾಯಿಲೆಯ ವರದಿಯಾದ ನಂತರ ವಿಶ್ವ ಆರೋಗ್ಯ ಸಂಸ್ಥೆ-ಡಬ್ಲ್ಯುಎಚ್‌ಒ, ಎಬೋಲಾ ವೈರಸ್ ಅಂತಾರಾಷ್ಟ್ರೀಯ ಕಾಳಜಿಯ ಸಾರ್ವಜನಿಕ ಆರೋಗ್ಯ ತುರ್ತು ಪರಿಸ್ಥಿತಿ ಎಂದು ಘೋಷಿಸಿತ್ತು.

<><><><>

ಕೇಂದ್ರ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವ ರಾಜೀವ್ ರಂಜನ್ ಸಿಂಗ್ ಅವರು ನಾಳೆ ಮಿಜೋರಾಂನ ಐಜ್ವಾಲ್‌ನಲ್ಲಿ ಈಶಾನ್ಯ ಪ್ರದೇಶದ ಪ್ರಾದೇಶಿಕ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಈಶಾನ್ಯ ಪ್ರದೇಶದಾದ್ಯಂತ ಮೀನುಗಾರಿಕೆ,

ಪಶುಸಂಗೋಪನೆ ಮತ್ತು ಹೈನುಗಾರಿಕೆ ಕ್ಷೇತ್ರಗಳಲ್ಲಿ ಜಾರಿಗೆ ತರಲಾಗುತ್ತಿರುವ ವಿವಿಧ ಯೋಜನೆಗಳು ಮತ್ತು ಕಾರ್ಯಕ್ರಮಗಳ ಪ್ರಗತಿಯನ್ನು ಪರಿಶೀಲಿಸುವತ್ತ ಸಭೆಯು ಪ್ರಾಥಮಿಕವಾಗಿ ಗಮನಹರಿಸಲಿದೆ. ಸುಸ್ಥಿರ ವಲಯ ಬೆಳವಣಿಗೆ, ರೈತರ ಕಲ್ಯಾಣ ಮತ್ತು ಜೀವನೋಪಾಯ ವರ್ಧನೆಗಾಗಿ ಭವಿಷ್ಯದ ಕಾರ್ಯತಂತ್ರಗಳ ಕುರಿತು ಚರ್ಚೆಗಳು ನಡೆಯಲಿವೆ. ಸಭೆಯಲ್ಲಿ, ಸಚಿವರು ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ ಮತ್ತು ಮೀನುಗಾರಿಕೆ ಮತ್ತು ಜಲಚರ ಸಾಕಣೆ ಮೂಲಸೌಕರ್ಯ ಅಭಿವೃದ್ಧಿ ನಿಧಿಯಡಿಯಲ್ಲಿ ೩೨ ಕೋಟಿ ರೂಪಾಯಿಗಳಿಗೂ ಹೆಚ್ಚಿನ ಮೊತ್ತದ ಪ್ರಮುಖ ಯೋಜನೆಗಳನ್ನು ಉದ್ಘಾಟಿಸಿ ಅಡಿಪಾಯ ಹಾಕಲಿದ್ದಾರೆ. ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ರಾಜ್ಯ ಸಚಿವ ಪ್ರೊಫೆಸರ್ ಎಸ್.ಪಿ.ಸಿಂಗ್ ಬಾಘೇಲ್ ಅವರು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ.

<><><><>

ಜಿನೀವಾದಲ್ಲಿ ನಿನ್ನೆ ಆರು ದಿನಗಳ ೭೮ನೇ ವಿಶ್ವ ಆರೋಗ್ಯ ಸಭೆ ಮುಕ್ತಾಯಗೊಂಡಿದ್ದು, ಮಾನವ ಆರೋಗ್ಯವನ್ನು ಕಾಪಾಡುವಲ್ಲಿ ಬಹುಪಕ್ಷೀಯ ಸಹಕಾರವನ್ನು ಮುನ್ನಡೆಸಲು ಸದಸ್ಯ ರಾಷ್ಟ್ರಗಳು ಬಹು ನಿರ್ಣಯಗಳನ್ನು ಅಂಗೀಕರಿಸಿದವು. ‘ಜಾಗತಿಕ ಆರೋಗ್ಯವನ್ನು ಮರುರೂಪಿಸುವುದು: ಹಂಚಿಕೆಯ ಜವಾಬ್ದಾರಿ" ಎಂಬ ವಿಷಯದ ಅಡಿಯಲ್ಲಿ ನಡೆದ ಸಭೆಯು ಪಾರ್ಶ್ವವಾಯು, ಕ್ಷಯ, ಆಂಟಿಮೈಕ್ರೊಬಿಯಲ್ ಪ್ರತಿರೋಧ, ತುರ್ತು ಆರೈಕೆ, ಹಿಮೋಫಿಲಿಯಾ, ನಿಖರ ಔಷಧ ಮತ್ತು ವಿಕಿರಣ ಸೇರಿದಂತೆ ವಿಷಯಗಳ ಕುರಿತು ೨೦ಕ್ಕೂ ಹೆಚ್ಚು ನಿರ್ಧಾರಗಳು ಮತ್ತು ೧೩ ನಿರ್ಣಯಗಳನ್ನು ಅಂಗೀಕರಿಸಿತು. ವಿಶ್ವ ಆರೋಗ್ಯ ಸಂಸ್ಥೆಯು, ಆಯೋಜಿಸಿದ ಸದಸ್ಯ ರಾಷ್ಟ್ರ ನೇತೃತ್ವದ ಜಂಟಿ ಪ್ರಕ್ರಿಯೆಯ ಮೂಲಕ ಜಾಗತಿಕ ಆರೋಗ್ಯ ವಾಸ್ತುಶಿಲ್ಪವನ್ನು ಸುಧಾರಿಸುವ ಒಪ್ಪಂದ ಸೇರಿದಂತೆ ಹಲವಾರು ರಾಜಕೀಯ ಮತ್ತು ಆಡಳಿತಾತ್ಮಕ ಸಮಸ್ಯೆಗಳನ್ನು ಸಭೆಯು ಪರಿಹರಿಸಿತು.

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರ ಲೇಖನವನ್ನು ಹಂಚಿಕೊಂಡಿದ್ದಾರೆ. ಇದರಲ್ಲಿ ಖಂಗ್‌ಚೆಂಡ್‌ಜೊಂಗಾದ ಐದು ಸಂಪತ್ತುಗಳು ಸಿಕ್ಕಿಂನ ಪ್ರಯಾಣವನ್ನು ಹೇಗೆ ಪ್ರವರ್ಧಮಾನಕ್ಕೆ ಏರಿಸಿವೆ ಎಂಬುದನ್ನು ಪ್ರಸ್ತಾವಿಸುತ್ತವೆ. ಇದು ೨೦೪೭ ರ ವಿಕಸಿತ ಸಿಕ್ಕಿಂಗೆ ದಾರಿ ಮಾಡಿಕೊಡುತ್ತದೆ. ಈ ಕುರಿತು ಸಾಮಾಜಿಕ ಮಾಧ್ಯಮ

ಪೋಸ್ಟ್‌ನಲ್ಲಿ ಪ್ರಧಾನಿ, ಲೇಖನವು ಖಂಗ್‌ಚೆಂಡ್‌ಜೊಂಗಾವನ್ನು ಸಿಕ್ಕಿಂನ ಭೂಮಿ, ನೆನಪು ಮತ್ತು ಪ್ರಜ್ಞೆಯ ರಕ್ಷಕನಾಗಿ ಚಿತ್ರಿಸುತ್ತದೆ ಎಂದು ಹೇಳಿದರು.

<><><><>

ಚೀನಾದ ಶಾನ್‌ಕ್ಸಿ ಪ್ರಾಂತ್ಯದಲ್ಲಿ ಸಂಭವಿಸಿದ ಭೀಕರ ಕಲ್ಲಿದ್ದಲು ಗಣಿ ಸ್ಫೋಟದಲ್ಲಿ ಕನಿಷ್ಠ ೮೨ ಜನರು ಮೃತಪಟ್ಟಿದ್ದಾರೆ. ಸ್ಫೋಟ ಸಂಭವಿಸಿದಾಗ ೨೪೭ ಕಾರ್ಮಿಕರು ಕರ್ತವ್ಯದಲ್ಲಿದ್ದರು ಎಂದು ವರದಿಯಾಗಿದೆ.  ಭೀಕರ ಗಣಿ ಸ್ಫೋಟದಿಂದ ಉಂಟಾದ ಪ್ರಾಣಹಾನಿಯ ಕುರಿತು ಪ್ರಧಾನಿ ನರೇಂದ್ರ ಮೋದಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ನಾಪತ್ತೆಯಾಗಿರುವವರ ಶೀಘ್ರ ಪತ್ತೆಗೆ ಮತ್ತು ಗಾಯಾಳುಗಳ ಚೇತರಿಕೆಗೆ ಪ್ರಧಾನಿಯವರು ಸಾಮಾಜಿಕ ಮಾಧ್ಯಮದಲ್ಲಿ ಪ್ರಾರ್ಥಿಸಿದ್ದಾರೆ.

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಪರಿಕಲ್ಪನೆಯ, ಫಿಟ್ ಇಂಡಿಯಾ ಸಂಡೇಸ್ ಆನ್ ಬೈಸಿಕಲ್, ೭೫ನೇ ಆವೃತ್ತಿಯ ಅಭಿಯಾನ, ದೇಶದ ೮ ಸಾವಿರಕ್ಕೂ ಅಧಿಕ ಸ್ಥಳಗಳಲ್ಲಿ, ಇಂದು ನಡೆಯುತ್ತಿದೆ. ಅಹಮದಾಬಾದ್‌ನಲ್ಲಿ ಜರುಗುಲಿರುವ ೨೦೩೦ರ ಕಾಮನವೆಲ್ತ್ ಕ್ರೀಡಾಕೂಟದ ಶತಮಾನೋತ್ಸವದ ಸ್ಮರಣಾರ್ಥ, ಗುಜರಾತಿನ ಸಬರಮತಿ ನದಿ ತೀರದಲ್ಲಿ ಇಂದು ಬೆಳಗ್ಗೆ ಕೇಂದ್ರ ಯುವಜನ ವ್ಯವಹಾರ ಹಾಗೂ ಕ್ರೀಡಾ ಖಾತೆ ಸಚಿವ ಮನ್ಸುಖ್ ಮಾಂಡವೀಯ ಫಿಟ್ ಇಂಡಿಯಾ ಸಂಡೇಸ್ ಆನ್ ಬೈಸಿಕಲ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

<><><><>

೪೮ನೇ ಫ್ಲೈಟ್ ಟೆಸ್ಟ್ ಕೋರ್ಸ್‌ನ ಹನ್ನೊಂದು ಟೆಸ್ಟ್ ಪೈಲಟ್‌ಗಳು ಮತ್ತು ಆರು ಫ್ಲೈಟ್ ಟೆಸ್ಟ್ ಎಂಜಿನಿಯರ್‌ಗಳು ೪೮ ವಾರಗಳ ಕಠಿಣ ತರಬೇತಿ ಪಠ್ಯಕ್ರಮವನ್ನು ಪೂರ್ಣಗೊಳಿಸಿದ ನಂತರ ನಿನ್ನೆ ಬೆಂಗಳೂರಿನಲ್ಲಿರುವ ಏರ್ ಫೋರ್ಸ್ ಟೆಸ್ಟ್ ಪೈಲಟ್ಸ್ ಸ್ಕೂಲ್-ಎಎಫ್‌ಟಿಪಿಎಸ್ ನಿಂದ ಪದವಿ ಪಡೆದರು. ಈ ವರ್ಷ, ಪದವಿ ಕೋರ್ಸ್ ಭಾರತೀಯ ವಾಯುಪಡೆಯ ೧೪ ಅಧಿಕಾರಿಗಳು, ಭಾರತೀಯ ಸೇನೆಯ ಒಬ್ಬ ಅಧಿಕಾರಿ ಮತ್ತು ಭಾರತೀಯ ನೌಕಾಪಡೆಯ ಇಬ್ಬರು ಅಧಿಕಾರಿಗಳು ಸೇರಿದಂತೆ ೧೭ ಅಧಿಕಾರಿಗಳ ಸಮೂಹವನ್ನು ಒಳಗೊಂಡಿತ್ತು. ವಾಯುಪಡೆಯ ಮುಖ್ಯಸ್ಥ ಮತ್ತು ೧೭ನೇ ಫ್ಲೈಟ್ ಟೆಸ್ಟ್ ಕೋರ್ಸ್‌ನ ಗೌರವಾನ್ವಿತ ಹಳೆಯ ವಿದ್ಯಾರ್ಥಿ ಏರ್ ಚೀಫ್ ಮಾರ್ಷಲ್ ಎಪಿ

ಸಿಂಗ್, ಪಿವಿಎಸ್‌ಎಂ, ಎವಿಎಸ್‌ಎಂ, ವಾಯುಪಡೆಯ ಮುಖ್ಯಸ್ಥರು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗಿಯಾಗಿದ್ದರು.

<><><><>

ಫಿಫಾದಿಂದ ಅನುಮೋದನೆ ಪಡೆದ ನಂತರ ಇರಾನ್‌ನ ಫುಟ್‌ಬಾಲ್ ತಂಡವು, ತನ್ನ ೨೦೨೬ ರ ಫಿಫಾ ವಿಶ್ವಕಪ್ ಬೇಸ್ ಕ್ಯಾಂಪ್ ಅನ್ನು ಅಮೆರಿಕದಿಂದ ಮೆಕ್ಸಿಕೊಗೆ ಸ್ಥಳಾಂತರಿಸಲು ನಿರ್ಧರಿಸಿದೆ. ಮುಂದಿನ ವರ್ಷದ ಪಂದ್ಯಾವಳಿಗೆ ಮುಂಚಿತವಾಗಿ ಇರಾನ್, ಅಮೆರಿಕ ಮತ್ತು ಇಸ್ರೇಲ್ ನಡುವಿನ ಹೆಚ್ಚುತ್ತಿರುವ ಭೌಗೋಳಿಕ ರಾಜಕೀಯ ಉದ್ವಿಗ್ನತೆಯ ಮಧ್ಯೆ ಈ ಕ್ರಮ ಕೈಗೊಳ್ಳಲಾಗಿದೆ. ಇರಾನ್ ಮೂಲತಃ ವಿಶ್ವಕಪ್ ಸಮಯದಲ್ಲಿ ಅರಿಜೋನಾದ ಟಕ್ಸನ್‌ನಲ್ಲಿ ತರಬೇತಿ ನೀಡಲು ನಿರ್ಧರಿಸಲಾಗಿತ್ತು, ಆದರೆ ಈಗ ಮೆಕ್ಸಿಕೊದ ಟಿಜುವಾನಾದಲ್ಲಿ ನೆಲೆಗೊಳ್ಳಲಿದೆ ಎಂದು ವರದಿಯಾಗಿದೆ. ಇರಾನ್ ಫುಟ್‌ಬಾಲ್ ಫೆಡರೇಶನ್ ಅಧ್ಯಕ್ಷ ಮೆಹದಿ ತಾಜ್, ಪಂದ್ಯಾವಳಿ ಅಧಿಕಾರಿಗಳೊಂದಿಗೆ ಚರ್ಚೆಯ ನಂತರ ಫಿಫಾ ತಮ್ಮ ವಿನಂತಿಯನ್ನು ಅನುಮೋದಿಸಿದೆ ಎಂದು ದೃಢಪಡಿಸಿದ್ದಾರೆ.

<><><><>

ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯಾವಳಿಯಲ್ಲಿಂದು ಎರಡು ಪಂದ್ಯಗಳು ನಡೆಯಲಿದ್ದು, ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿರುವ ಮೊದಲ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಹಾಗೂ ರಾಜಸ್ತಾನ್ ರಾಯಲ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಮಧ್ಯಾಹ್ನ ೩.೩೦ ಕ್ಕೆ ಆರಂಭವಾಗಲಿದೆ. ಕೊಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ರಾತ್ರಿ ೭.೩೦ ಕ್ಕೆ ಪ್ರಾರಂಭವಾಗಲಿರುವ ದಿನದ ಎರಡನೇ ಪಂದ್ಯದಲ್ಲಿ ಕೊಲ್ಕತ್ತಾ ನೈಟ್ ರೈಡರ್ಸ್ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಸೆಣಸಲಿವೆ.

<><><><>

ರೋಲ್ಯಾಂಡ್ ಗ್ಯಾರೋಸ್ ಎಂದು ಕರೆಯಲ್ಪಡುವ ಫ್ರೆಂಚ್ ಓಪನ್ ಟೆನಿಸ್ ೧೨೫ನೇ ಆವೃತ್ತಿಯು ಇಂದು ಪ್ಯಾರಿಸ್‌ನಲ್ಲಿ ಆರಂಭವಾಗಲಿದೆ. ದಾಖಲೆಯ ೨೫ನೇ ಗ್ರ್ಯಾಂಡ್ ಸ್ಲ್ಯಾಮ್ ಪ್ರಶಸ್ತಿಗಾಗಿ ಜೊಕೊವಿಕ್ ತಮ್ಮ ಅಭಿಯಾನ ಪ್ರಾರಂಭಿಸಲಿದ್ದಾರೆ. ಅವರು, ಮೂರು ಬಾರಿಯ ಚಾಂಪಿಯನ್, ಮೂರನೇ ಶ್ರೇಯಾಂಕಿತ, ಕೋರ್ಟ್ ಫಿಲಿಪ್-ಚಾಟ್ರಿಯರ್‌ನಲ್ಲಿ ರಾತ್ರಿ ಸೆಷನ್‌ನಲ್ಲಿ ಫ್ರೆಂಚ್ ಬಿಗ್-ಸರ್ವರ್ ಜಿಯೋವಾನಿ ಎಂಪೆಟ್ಶಿ ಪೆರಿಕಾರ್ಡ್ ವಿರುದ್ಧ ಆರಂಭಿಕ ಪಂದ್ಯವನ್ನು ಆಡಲಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>